22

# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 195 (205) |
| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಹೆಸರು | ಶ್ರೀ ಐವನ್ ಡಿ'ಸೋಜಾ<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 06-03-2025 |
| ಉತ್ತರಿಸುವ ಸಚಿವರು | ಮಾನ್ಯ ಮುಖ್ಯಮಂತ್ರಿಗಳು |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕರ್ನಾಟಕ ಲೋಕಸೇವಾ ಆಯೋಗದಲ್ಲಿ ಎಷ್ಟು ಸದಸ್ಯರಿದ್ದಾರೆ; ಯಾವ ಯಾವ ವರ್ಷಗಳಲ್ಲಿ ಸದಸ್ಯರುಗಳ ಸಂಖ್ಯೆಯನ್ನು ಹೆಚ್ಚಿಸಲಾಗಿದೆ; (ವರ್ಷವಾರು ವಿವರಗಳನ್ನು ನೀಡುವುದು)</td><td>ಕರ್ನಾಟಕ ಲೋಕಸೇವಾ ಆಯೋಗಕ್ಕೆ ಪ್ರಸ್ತುತ ಓರ್ವ ಅಧ್ಯಕ್ಷರು ಮತ್ತು 15 ಸದಸ್ಯರು ನೇಮಕಗೊಂಡಿರುತ್ತಾರೆ. ಸದಸ್ಯರುಗಳ ಸಂಖ್ಯೆಯನ್ನು ಹೆಚ್ಚಿಸಲಾಗಿರುವ ವರ್ಷವಾರು ವಿವರ ಈ ಕೆಳಕಂಡಂತಿದೆ.<br><br>
<table>
<tr><th>ಕ್ರ. ಸಂ.</th><th>ವರ್ಷ</th><th>ನಿಗದಿಪಡಿಸಲಾದ ಸದಸ್ಯರ ಸಂಖ್ಯೆ</th></tr>
<tr><td>1</td><td>1996</td><td>07</td></tr>
<tr><td>2</td><td>1997</td><td>06</td></tr>
<tr><td>3</td><td>2006</td><td>07</td></tr>
<tr><td>4</td><td>2009</td><td>09</td></tr>
<tr><td>5</td><td>2014</td><td>13</td></tr>
<tr><td>6</td><td>2023</td><td>15</td></tr>
</table></td></tr>
<tr><td>ಆ)</td><td>ಈ ಸಂಸ್ಥೆಯಲ್ಲಿ ಸದಸ್ಯರ ಸಂಖ್ಯೆಯನ್ನು ನಿಗಧಿಪಡಿಸಲು ಅಳವಡಿಸಿಕೊಂಡಿರುವ ಮಾನದಂಡಗಳು ಯಾವುವು; ಹಾಗೂ ಸದಸ್ಯರನ್ನು ನೇಮಿಸುವ ಮಾನದಂಡಗಳು ಯಾವುವು;</td><td>ಆಯೋಗದ ಸದಸ್ಯರನ್ನು ಭಾರತ ಸಂವಿಧಾನದ ಅನುಚ್ಛೇದ 316ರ ಮೇರೆಗೆ ನೇಮಕ ಮಾಡಲಾಗುತ್ತದೆ. ಸಂವಿಧಾನದ ಅನುಚ್ಛೇದ 316ರಲ್ಲಿ ಈ ಕೆಳಗಿನಂತಿರುತ್ತದೆ:<br><br>1. ಲೋಕಸೇವಾ ಆಯೋಗದ ಅಧ್ಯಕ್ಷರನ್ನು ಮತ್ತು ಇತರ ಸದಸ್ಯರನ್ನು ಒಕ್ಕೂಟ ಆಯೋಗದ ಅಥವಾ ಜಂಟಿ ಆಯೋಗದ ಸಂದರ್ಭದಲ್ಲಿ ರಾಷ್ಟ್ರಪತಿಯು ಮತ್ತು ರಾಜ್ಯದ ಆಯೋಗದ ಸಂದರ್ಭದಲ್ಲಿ ರಾಜ್ಯದ ರಾಜ್ಯಪಾಲರು ನೇಮಕ</td></tr>
</table>

| | | |
|---|---|---|
| | | ಮಾಡತಕ್ಕದ್ದು.<br><br>ಪರಂತು, ಪ್ರತಿಯೊಂದು ಲೋಕಸೇವಾ ಆಯೋಗದ ಸದಸ್ಯರಲ್ಲಿ ಸಾಧ್ಯವಾಗಬಹುದಾದ ಮಟ್ಟಿಗೆ ಅರ್ಧದಷ್ಟು ಸದಸ್ಯರು, ಅವರು ಅನುಕ್ರಮವಾಗಿ ನೇಮಕಗೊಂಡ ದಿನಾಂಕಗಳಂದು ಭಾರತ ಸರ್ಕಾರದ ಅಧೀನದಲ್ಲಾಗಲಿ ಅಥವಾ ರಾಜ್ಯ ಸರ್ಕಾರದ ಅಧೀನದಲ್ಲಾಗಲಿ ಕನಿಷ್ಠ ಪಕ್ಷ 10 ವರ್ಷಗಳವರೆಗೆ ಪದಧಾರಣ ಮಾಡಿದವರಾಗಿರತಕ್ಕದ್ದು ಮತ್ತು ಈ 10 ವರ್ಷಗಳ ಅವಧಿಯನ್ನು ಲೆಕ್ಕ ಹಾಕುವಲ್ಲಿ ಈ ಸಂವಿಧಾನವು ಪ್ರಾರಂಭವಾಗುವುದಕ್ಕೆ ಮುಂಚೆ ಭಾರತ ಸಾಮ್ರಾಟನ ಅಧೀನದಲ್ಲಿ ಅಥವಾ ಒಂದು ಭಾರತೀಯ ಸಂಸ್ಥಾನ ಸರ್ಕಾರದ ಅಧೀನದಲ್ಲಿ ಒಬ್ಬ ವ್ಯಕ್ತಿಯು ಪದಧಾರಣ ಮಾಡಿದ್ದ ಯಾವುದೇ ಅವಧಿಯನ್ನು ಸೇರಿಸಿಕೊಳ್ಳತಕ್ಕದ್ದು ಎಂದಿರುತ್ತದೆ.<br><br>ಭಾರತ ಸಂವಿಧಾನದ ಅನುಚ್ಛೇದ 318(ಎ)ರಲ್ಲಿ ಆಯೋಗದ ಸದಸ್ಯರ ಸಂಖ್ಯೆಯನ್ನು ಮತ್ತು ಅವರ ಸೇವಾ ಷರತ್ತುಗಳನ್ನು ರಾಜ್ಯದ ರಾಜ್ಯಪಾಲರು ನಿರ್ಧರಿಸಬಹುದು ಎಂದು ಉಲ್ಲೇಖಿಸಲಾಗಿದ್ದು ಸದರಿ ಅನುಚ್ಛೇದದಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸರ್ಕಾರವು ಕಾಲಕಾಲಕ್ಕೆ ಆದೇಶವನ್ನು ಜಾರಿಗೊಳಿಸುವುದರ ಮೂಲಕ ಸದಸ್ಯರ ಸಂಖ್ಯೆಯನ್ನು ನಿಗಧಿಪಡಿಸುತ್ತದೆ. |

| | | |
|---|---|---|
| ಇ) | ಯುಪಿಎಸ್‌ಸಿ ಮತ್ತು ರಾಜ್ಯಗಳ ಇತರ ಪಿಎಸ್‌ಸಿಗಳಿಗೆ ಹೋಲಿಸಿದರೆ ಸದಸ್ಯರ ಸಂಖ್ಯೆ ಗಣನೀಯವಾಗಿ ಹೆಚ್ಚು ಇರುವುದರಿಂದ ಸೇವೆಗೆ ಆಯ್ಕೆ ಮಾಡುವ ಅಭ್ಯರ್ಥಿಗಳಲ್ಲಿ ಪಾರದರ್ಶಕತೆ ಇಲ್ಲದೆ ಇರುವುದರಿಂದ ಈ ಬಗ್ಗೆ ತೆಗೆದುಕೊಳ್ಳುವ ಕ್ರಮಗಳೇನು; | ಕರ್ನಾಟಕ ಲೋಕಸೇವಾ ಆಯೋಗವು ನಡೆಸುವ ನೇಮಕಾತಿ ಪ್ರಕ್ರಿಯೆಯನ್ನು ಪಾರದರ್ಶಕವಾಗಿ ಮತ್ತು ಜಾಗರೂಕತೆಯಿಂದ ನಿರ್ವಹಿಸುತ್ತಿದೆ. |
| ಈ) | ಕೆಪಿಎಸ್‌ಸಿಯಲ್ಲಿ ಯುಪಿಎಸ್‌ಸಿ ಮಾದರಿಯಲ್ಲಿ ಸದಸ್ಯರನ್ನು ನೇಮಿಸಿ ಗುಣಮಟ್ಟವನ್ನು ಹೆಚ್ಚಿಸಲು ಸರ್ಕಾರಕ್ಕೆ ಇರುವ ತೊಂದರೆಗಳೇನು; (ವಿವರ ನೀಡುವುದು) | |
| ಉ) | ಕೆ.ಪಿ.ಎಸ್.ಸಿ., ಯು ರಾಜಕೀಯ ಕೇಂದ್ರವಾಗಿ ಕಾರ್ಯನಿರ್ವಹಿಸುತ್ತಿದ್ದು, ಅದರ ಗುಣಮಟ್ಟವನ್ನು ಕಾಯ್ದುಕೊಳ್ಳುವುದರಲ್ಲಿ ವಿಫಲಗೊಂಡಿರುವುದರಿಂದ ಸರ್ಕಾರವು ತೆಗೆದುಕೊಳ್ಳುವ ಕ್ರಮವೇನು? | ಕರ್ನಾಟಕ ಲೋಕಸೇವಾ ಆಯೋಗವು ಒಂದು ಸಂವಿಧಾನಾತ್ಮಕ ಸಂಸ್ಥೆಯಾಗಿದ್ದು, ರಾಜ್ಯದ ನಾಗರೀಕ ಸೇವೆಗಳ ಗ್ರೂಪ್ `ಎ', `ಬಿ' ಮತ್ತು `ಸಿ' ವೃಂದದ ವಿವಿಧ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಕಾರ್ಯವನ್ನು ಮತ್ತು ರಾಜ್ಯ ನಾಗರೀಕ ಸೇವೆಯ ಅಧಿಕಾರಿ/ನೌಕರರುಗಳಿಗೆ ಕನ್ನಡ ಭಾಷಾ ಪರೀಕ್ಷೆ ಮತ್ತು ಇತರ ಸೇವಾ ಪರೀಕ್ಷೆಗಳನ್ನು ನಡೆಸುವ ಕಾರ್ಯಗಳನ್ನು ನಿರ್ವಹಿಸುತ್ತಿದೆ.<br><br>ಆಯೋಗವು ಕೇವಲ ಆಯ್ಕೆ ಪ್ರಾಧಿಕಾರವಾಗಿದ್ದು, ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ ನಿಯಮಗಳು, ಆದೇಶಗಳು, ಸುತ್ತೋಲೆಗಳಲ್ಲದೆ, ಚಾಲ್ತಿಯಲ್ಲಿರುವ ನೇಮಕಾತಿ ನಿಯಮಗಳು ಹಾಗೂ ಇಲಾಖೆಗಳ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ನೇಮಕಾತಿ ಪ್ರಕ್ರಿಯೆಯನ್ನು ಕೈಗೊಳ್ಳುತ್ತದೆ. ಕೆ.ಪಿ.ಎಸ್.ಸಿ.ಯು |

| | | |
|---|---|---|
| | | ಕೇವಲ ಆಯ್ಕೆ ಪ್ರಾಧಿಕಾರವಾಗಿರುವುದರಿಂದ ಆಯೋಗಕ್ಕೆ ಸ್ವಂತವಾಗಿ ಯಾವುದೇ ನಿಯಮಗಳನ್ನು ರೂಪಿಸಿಕೊಳ್ಳಲು ನಿಯಮಗಳಲ್ಲಿ ಅವಕಾಶ-ವಿರುವುದಿಲ್ಲ. ಆದ್ದರಿಂದ, ರಾಜಕೀಯ ಕೇಂದ್ರವಾಗಿ ಕಾರ್ಯನಿರ್ವಹಿಸುತ್ತಿದೆ ಎಂಬ ಅಂಶದಲ್ಲಿ ಯಾವುದೇ ಸತ್ಯಾಂಶವಿರುವುದಿಲ್ಲ. |

**ಸಂಖ್ಯೆ.ಸಿಆಸುಇ 42 ಎಸ್‌ಎಲ್‌ಎ 2025**

(ಸಿದ್ದರಾಮಯ್ಯ)

**ಮುಖ್ಯಮಂತ್ರಿ**